ಅ) ನಾಗಮಂಗಲ ತಾಲ್ಲೂಕಿನಲ್ಲಿ 2001-02ನೇ ಸಾಲಿಗೆ 6 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು ಕಟ್ಟಡಗಳನ್ನು ನಿರ್ಮಿಸಲಾಗಿದೆ. 2002-03ನೇ ಸಾಲಿನಲ್ಲಿ 10 ಅಂಗನವಾಡಿ ಕಟ್ಟಡಗಳು ಹಂಚಿಕೆಯಾಗಿದ್ದು, ತಾಲ್ಲೂಕು ಪಂಚಾಯ್ತಿಯಿಂದ ಕ್ರಿಯಾ ಯೋಜನೆ ಮಂಜೂರಾದ ನಂತರ ಪ್ರಾರಂಭಿಸಲಾಗುವುದು.

ಇ) ನಾಗಮಂಗಲ ತಾಲ್ಲೂಕಿನಲ್ಲಿ ಕೆಲವು ಅಂಗನವಾಡಿ ಕೇಂದ್ರಗಳು ಸರಿಯಾದ ರೀತಿಯಲ್ಲಿ ನಡೆಯದಿರುವುದು ಹಾಗೂ ಮಸ್ತ್ಗಳ ಸರಬರಾಜು ವಿಷಯದಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ನಾಗಮಂಗಲ ತಾಲ್ಲೂಕಿನ 3 ಉರ್ದು ಸರ್ಕಾರಿ ಶಾಲೆಗಳಲ್ಲಿ ಆಹಾರ ಸರಬರಾಜಿನ ಅವ್ಯವಹಾರ

125(357) ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ನಾಗಮಂಗಲ ತಾಲ್ಲೂಕಿನ ಮೂರು ಉರ್ದು ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಉಪಹಾರ ಸರಬರಾಜಿನಲ್ಲಿ ನಾಗಮಂಗಲ ಪಟ್ಟಣ ಆಹಾರ ಸರಬರಾಜು ಬಳಕೆದಾರರ ಸಹಕಾರ ಸಂಘದ ಕಾರ್ಯದರ್ಶಿಯವರಿಂದ ಆಗಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಬಂದಿದೆ.

ಬಳಕೆದಾರರ ಸಹಕಾರ ಸಂಘ, ನಾಗಮಂಗಲ ಪಟ್ಟಣ ಪ್ರದೇಶದವರು ಮಧ್ಯಾಹ್ನ ಉಪಹಾರ ಯೋಜನೆಯಡಿ ಅಕ್ಟೋಬರ್, 1999ರ ಮಾಹೆಯ 11.37 ಕ್ವಿಂಟಾಲ್ ಅಕ್ಕಿಯನ್ನು ಜೂನ್, 2000ದ ಮಾಹೆಯಲ್ಲಿ ವಿತರಿಸಿದ ಹಿನ್ನೆಲೆಯಲ್ಲಿ, ಸಹಕಾರ ಸಂಘದ ಪ್ರಾಧಿಕಾರವನ್ನು ವಿಚಾರಣೆ ಕಾಯ್ದಿರಿಸಿ, ಅಮಾನತ್ತು ಪಡಿಸಲಾಗಿತ್ತು. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ದಿನಾಂಕ: 12-4-2002ರಂದು ಅಂತಿಮ ಆದೇಶ ಹೊರಡಿಸಿ ರೂ. 5,000-00 ದಂಡವನ್ನು ವಿಧಿಸಿ, ಅಮಾನತ್ತು ಆದೇಶವನ್ನು ತೆರವುಗೊಳಿಸಲಾಗಿರುತ್ತದೆ.

ಸಂಘದ ಆಡಳಿತ ಮಂಡಳಿಯು ಕಾರ್ಯದರ್ಶಿಯವರನ್ನು ಅಮಾನತ್ತುಪಡಿಸಿದ್ದು, ಅಮಾನತ್ತು ಆದೇಶ ಮುಂದುವರೆದಿರುತ್ತದೆ.